## SECTION A

**Q1. ಕೆಳಗೆ ಕೊಟ್ಟಿರುವ ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ. ಪ್ರತಿಯೊಂದು ಟಿಪ್ಪಣಿ 150 ಪದಗಳಿಗೆ ಮೀರದಂತೆ ಇರಬೇಕು.** *10×5=50*

(a) ಭಾಷೆ ಎಂದರೇನು ? ವಿದ್ವಾಂಸರ ವ್ಯಾಖ್ಯೆಗಳ ಹಿನ್ನೆಲೆಯಲ್ಲಿ ಚರ್ಚಿಸಿರಿ 10

(b) ರಾಘವಾಂಕನ ಹರಿಶ್ಚಂದ್ರ ಕಾವ್ಯದ ಜೀವನ ಸಂದೇಶ 10

(c) ಬಸವಣ್ಣನವರ ವಚನಗಳಲ್ಲಿ ಸಾಮಾಜಿಕ ಕಾಳಜಿ 10

(d) ದಾಸ ಸಾಹಿತ್ಯಕ್ಕೆ ಪುರಂದರದಾಸರ ಕೊಡುಗೆ 10

(e) ದಲಿತ ಸಾಹಿತ್ಯದ ಸ್ವರೂಪ-ಲಕ್ಷಣಗಳು 10

**Q2.** (a) ದ್ರಾವಿಡ ಭಾಷಾ ವೈಲಕ್ಷಣ್ಯಗಳನ್ನು ಕುರಿತು ವಿವರಿಸಿರಿ. 20

(b) ಕನ್ನಡ ನವೋದಯ ಕಾವ್ಯ ಪರಂಪರೆ ಮತ್ತು ಪ್ರಯೋಗ ವೈವಿಧ್ಯವನ್ನು ವಿವೇಚಿಸಿರಿ. 20

(c) ಪಂಪಭಾರತದ ನಾಯಕ ಯಾರು ? ಅವನ ಪಾತ್ರವನ್ನು ಕವಿ ಹೇಗೆ ಚಿತ್ರಿಸಿದ್ದಾನೆ ವಿವರಿಸಿರಿ. 10

**Q3.** (a) ಕನ್ನಡದ ಪ್ರಮುಖ ಸಾಮಾಜಿಕ ಮತ್ತು ಪ್ರಾದೇಶಿಕ ಉಪಭಾಷೆಗಳ ಕುರಿತು ವಿವರಿಸಿರಿ. 20

(b) ಕನ್ನಡದ ನವ್ಯಕಾವ್ಯ ನಡೆದು ಬಂದ ದಾರಿಯನ್ನು ವಿವೇಚಿಸಿರಿ. 20

(c) ನಾಗಚಂದ್ರನ ಪಂಪರಾಮಾಯಣದ ಅನನ್ಯತೆಯನ್ನು ಕುರಿತು ಚರ್ಚಿಸಿರಿ. 10

**Q4.** (a) ಕುಮಾರ ವ್ಯಾಸ ಭಾರತ ಸಮಕಾಲೀನ ರಾಜಕೀಯ ಮತ್ತು ಸಾಮಾಜಿಕ ಸಮಸ್ಯೆಗಳಿಗೂ ಕನ್ನಡಿ ಹಿಡಿಯುತ್ತದೆ - ಈ ಮಾತನ್ನು ಚರ್ಚಿಸಿರಿ. 20

(b) ಪ್ರಗತಿಶೀಲ ಸಾಹಿತ್ಯದ ತಾತ್ವಿಕ ನೆಲೆಗಳನ್ನು ಕುರಿತು ಚರ್ಚಿಸಿರಿ. 20

(c) ಕನ್ನಡ ಭಾಷೆಯಲ್ಲಿ ಸ್ವೀಕರಣ ಕುರಿತು ಸೋದಾಹರಣವಾಗಿ ವಿವರಿಸಿರಿ. 10



## SECTION B

**Q5. ಕೆಳಗೆ ಕೊಟ್ಟಿರುವ ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ. ಪ್ರತಿಯೊಂದು ಟಿಪ್ಪಣಿ 150 ಪದಗಳಿಗೆ ಮೀರದಂತೆ ಇರಬೇಕು.** *10×5=50*

(a) ಕಾವ್ಯಲಕ್ಷಣಗಳನ್ನು ಅಲಂಕಾರಿಕರ ವ್ಯಾಖ್ಯೆಗಳೊಂದಿಗೆ ಚರ್ಚಿಸಿರಿ. 10

(b) ವಿಮರ್ಶೆಯ ಕಾರ್ಯ 10

(c) ಬಾದಾಮಿ ಗುಹೆಗಳು 10

(d) ಸಂಗೀತಕ್ಕೆ ವಿಜಯನಗರ ಅರಸರ ಕೊಡುಗೆ 10

(e) ಹೊಯ್ಸಳರ ವಾಸ್ತುಶಿಲ್ಪ 10

**Q6.** (a) ಕಾವ್ಯದಲ್ಲಿ ಅಲಂಕಾರಗಳ ಬಳಕೆ ಮತ್ತು ಅವುಗಳ ಮಹತ್ವವನ್ನು ವಿವರಿಸಿರಿ. 20

(b) ಕರ್ನಾಟಕ ಸಂಸ್ಕೃತಿಯಲ್ಲಿ ‘ಧರ್ಮ ಸಮನ್ವಯತೆ’ ಕುರಿತು ವಿಶ್ಲೇಷಿಸಿರಿ. 20

(c) ಸ್ತ್ರೀವಾದಿ ವಿಮರ್ಶೆಯ ತಾತ್ವಿಕತೆಯನ್ನು ಚರ್ಚಿಸಿರಿ. 10

**Q7.** (a) ರಸ ಸಿದ್ಧಾಂತ ಕುರಿತು ಭಾರತೀಯ ಅಲಂಕಾರಿಕರಲ್ಲಿ ನಡೆದ ಚರ್ಚೆಯನ್ನು ಪರಿಶೀಲಿಸಿರಿ. 20

(b) ಕಾವ್ಯ ಮೀಮಾಂಸೆಯಲ್ಲಿ ಧ್ವನಿ ಸಿದ್ಧಾಂತ ಮತ್ತು ಧ್ವನಿಪ್ರಭೇದಗಳನ್ನು ವಿವೇಚಿಸಿರಿ. 20

(c) ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಪ್ರಮುಖ ಧರ್ಮಗಳನ್ನು ಪರಿಚಯಿಸಿರಿ. 10

**Q8.** (a) ಕನ್ನಡ ಸಾಹಿತ್ಯದಲ್ಲಿ ಪ್ರಸಾರಗೊಂಡಿರುವ ಕರ್ನಾಟಕ ಸಂಸ್ಕೃತಿಯ ಸ್ವರೂಪವನ್ನು ವಿವರಿಸಿರಿ. 20

(b) ಹರಿದಾಸರ ಕೀರ್ತನೆಗಳು ಮತ್ತು ಸಂಗೀತದ ಅಂತರ್ ಸಂಬಂಧವನ್ನು ವಿಶ್ಲೇಷಿಸಿರಿ. 20

(c) ನವ್ಯ ವಿಮರ್ಶೆಯ ತಾತ್ವಿಕ ನೆಲೆಗಳಾವುವು ? ವಿವರಿಸಿರಿ. 10